ಉಮಾ ರಾವ್

# ಉಂಗುರ

ಸಂಜೆಯಾಗುತ್ತಿತ್ತು. ಅಂದು ಮುಂಬೈನ ಗೇಟ್ವೇ ಆಫ್ ಇಂಡಿಯಾದ ಎದುರು ಸ್ವಲ್ಪ ದೂರದಲ್ಲೇ ನಿಂತ ಅವಳು ಅಲ್ಲಿಗೆ ಮೂರು ತಿಂಗಳ ನಂತರ ಬಂದಿದ್ದಳು. ಮೂರು ತಿಂಗಳು. ಅಂದು ಅವರಿಬ್ಬರೂ ಬೇರೆಯಾಗಿದ್ದರು. ಅದಕ್ಕೆ ಮೊದಲು ಎಷ್ಟೊಂದು ಸಂಜೆಗಳು ಕೈ ಕೈ ಹಿಡಿದು ಅಲ್ಲಿಯ ಮೋಟುಗೋಡೆಯ ಮೇಲೆ ಕೂತು ಸೂರ್ಯಾಸ್ತಗಳನ್ನು, ಒಂದರ ಹಿಂದೆ ಒಂದು ತಮ್ಮತ್ತ ಭೋರ್ಗರೆಯುತ್ತಾ ಬರುವ ಅಲೆಗಳನ್ನು, ದಿಗಂತದಲ್ಲಿ ತೇಲುವ ಮಿಣುಕು ದೀಪದ ದೋಣಿಗಳನ್ನು, ಮಕ್ಕಳಿಗಾಗಿ ಕಾಮನಬಿಲ್ಲಿನ ಬಣ್ಣದ ಸೋಪಿನ ಗುಳ್ಳೆಗಳನ್ನು ಊದುವ ಮಾರಾಟಗಾರರನ್ನು ನೋಡುತ್ತಾ ಮೈ ಮರೆತಿದ್ದರು. ಮೂರು ತಿಂಗಳ ಹಿಂದೆ ಒಂದು ಸಂಜೆ ಅವರಿಬ್ಬರ ನಡುವಿನ ಬಂಧ ಒಂದೇ ಏಟಿಗೆ ಕೊಚ್ಚಿ ಹೋಗಿತ್ತು. ನಂತರ ಎಷ್ಟೊಂದು ತಳಮಳ, ತೊಳಲಾಟ, ನೋವು. ಮೂರು ತಿಂಗಳು. ಆದರೂ ಎಲ್ಲೋ ಅವನ ನಾಡಿ ಬಡಿತ ಅವಳ ಎದೆಯಾಳದಲ್ಲಿ ಕೇಳಿಸುತ್ತಲೇ ಇತ್ತು.

ಅಂದು ಮತ್ತೆ ಗೇಟ್ವೇಗೆ ಬಂದಿದ್ದಳು. ಸ್ವಲ್ಪ ಹೊತ್ತು ಮೌನವಾಗಿ ಆಗಸ ದಿಟ್ಟಿಸುತ್ತಿದ್ದವಳು, ತನ್ನ ಹ್ಯಾಂಡ್ ಬ್ಯಾಗಿನಲ್ಲಿ ಕೈಹಾಕಿ ಒಂದು ಪುಟ್ಟ ಕಾಗದದ ಚೂರಿನಲ್ಲಿ ಕಟ್ಟಿದ ಎರಡು ಬೆಳ್ಳಿಯ ಕಾಲುಂಗುರಗಳನ್ನು ತೆಗೆದು ಮುಷ್ಟಿಯಲ್ಲಿ ಹಿಡಿದಳು. ನಡುಗುತ್ತಿದ್ದ ಬೆರಳುಗಳಿಂದ ಮೆಲ್ಲಗೆ ಆ ಪೊಟ್ಟಣ ಬಿಚ್ಚಿ ನೋಡಿದಳು. ಒಂದು ಜೊತೆ ಬೆಳ್ಳಿ ಕಾಲುಂಗುರಗಳು. ಇನ್ನೂ ಹೊಳಪು ಕಳೆದುಕೊಳ್ಳದ, ಸವೆಯದ ಕಾಲುಂಗುರಗಳು. ತಮ್ಮ ಪ್ರೇಮದ ಉತ್ತುಂಗದಲ್ಲಿದ್ದಾಗ ಅವನು ತೊಡಿಸಿದ್ದು. ಅವಳ ಕತ್ತಿನಲ್ಲಿ ಆಗಲೇ ಮಾಂಗಲ್ಯವಿದ್ದಿದ್ದರಿಂದ... ಕಾಲ್ಬೆರಳಿಗೆ ಬೆಳ್ಳಿಯುಂಗುರ. ಮರು ನಿಮಿಷವೇ ಮತ್ತೆ ಪೊಟ್ಟಣ ಕಟ್ಟಿ ಅಂದು ಸಂಜೆಯ ಹೊಂಬೆಳಕಿನಲ್ಲಿ ತೊಯ್ದಿದ್ದ ಅರಬ್ಬೀ ಕಡಲೊಳಗೆ ಅದನ್ನು ತನ್ನೆಲ್ಲಾ ಶಕ್ತಿ ಉಪಯೋಗಿಸಿ ಎಸೆದಳು. ಆ ಕ್ಷಣದಲ್ಲಿ ಅವನ ನೀಳ ಬೆರಳುಗಳ ನಲುಸ್ಪರ್ಶ, ಸಿಗರೇಟು ಬೆರೆತ ರಮ್ಮಿನ ಉಸುರಿನ ಮಾದಕತೆ, ಕಿವಿಯಲ್ಲಿ ಉಸುರಿದ ಬೆಚ್ಚನೆಯ ಮಾತುಗಳು, ದೇಹದ ಗಂಧದೊಡನೆ ಸೇರಿದ ಬ್ರುಟ್ ಪರಿಮಳ... ಎಲ್ಲವನ್ನೂ ತನ್ನಿಂದ ಕಿತ್ತೊಗೆಯುವಂತೆ. ತಾನು ಒರಗಿ ನಿಂತಿದ್ದ ತಡೆಗೋಡೆಗೆ ಅಪ್ಪಳಿಸುತ್ತಿದ್ದ ಸಮುದ್ರದ ಅಲೆಗಳು ಆ ಪುಟ್ಟ ಪೊಟ್ಟಣವನ್ನು ಸೆಳೆದೊಯ್ಯುವುದನ್ನೇ ನೋಡುತ್ತಾ ಕೆಲವು ನಿಮಿಷಗಳು ಅವಳು ಸ್ತಬ್ಧಳಾಗಿ ನಿಂತಿದ್ದಳು. ಅವಳ ಮುಖ ಸವರಿದ ಒದ್ದೆ ಗಾಳಿಯಿಂದ ತುಟಿಗಳು ಉಪ್ಪುಪ್ಪಾಗಿ ಕಣ್ಣೀರಿನಿಂದ ಒದ್ದೆಯಾಗಿದ್ದ



ಶಶಿಕಿರಣ್ ದೇಸಾಯಿ ಬಿ.